ಮೈಸೂರ ಗೆಜೆಟ.

ನಂ. 7 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1890

ಬೆಂಗಳೂರು, ಶನಿವಾರ, ಫಿಬ್ರವರಿ ತಾ|| 22, ಸನ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಪ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ಪ ಸೆಷನ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 12ನೇ ಫಿಬ್ರವರಿ 1890.

ನಂ. 328.—ಬೆಂಗಳೂರು ಷಹರ್ ದೇಖೀಲ್ ಬೆಂಗಳೂರು ಡಿಸ್ಟ್ರಿಕ್ಟ್‌ನ ಇದರಡಿಕಂಡ ತಾಲ್ಲೂಕುಗಳಲ್ಲಿಯೂ, ರೆಸಿಡೆಂಟರವರ ಆಪ್ಪಣೇ ಮೇರೆ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನಲ್ಲಿಯೂ, ಸುದಾ. 1890ನೇ ಇಸವಿ ಏಪ್ರಿಲ್ 1ನೇ ತಾರೀಖು ಮೊದಲು 1892ನೇ ಇಸವಿ ಮಾರ್ಚೀ 31ನೇ ತಾರೀಖು ವರಿಗೆ ಆಗುವ ಎರುಡು ವರುಷಗಳ ಕಾಲಪರಿಯಂತ ಕೀಂದೀ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ:—

1 (ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷ್ ಮತ್ತು ಬೆಂಗಳೂರು ಷಹರ್ ದೇಖೀಲ್) ಬೆಂಗಳೂರು ತಾಲ್ಲೂಕು.
2 ಹೊಸಕೋಟೆ ತಾಲ್ಲೂಕು.
3 ದೊಡ್ಡಬಳ್ಳಾಪುರ ತಾಲ್ಲೂಕು.
4 ನೆಲಮಂಗಲ ತಾಲ್ಲೂಕು.
5 ಕಾನಕಾನಹಳ್ಳಿ ಡಿಟೋ.
6 ಮಾಗಡಿ ತಾಲ್ಲೂಕು.
7 ಆನೇಕಲ್ಲು ಡಿಟೋ.
8 ದೇವನಹಳ್ಳಿ ಡಿಟೋ.
9 ಚನ್ನಪಟ್ಟಣದ ಡೆಪ್ಯೂಟಿ ಅಮಲ್ದಾರ್ರ ಚಾರ್ಜ್ ದೇ ಖೀಲ್ ಕ್ಲೋಸೆಪೇಟೆ ತಾಲ್ಲೂಕು.

2. ಪ್ರತಿ ದರಖಾಸ್ತೂ, ದರಖಾಸ್ತುದಾರನ ಯಿಚ್ಛಾನುಸಾರ ಮೇಲೆ ಕಂಡ ಯಲ್ಲಾತಾಲ್ಲೂಕುಗಳಿಗಾಗಲಿ, ಯಾವದಾದರೂ ಒಂದು ಯಾ ಹೆಚ್ಚು ತಾಲ್ಲೂಕುಗಳಿಗಾಗಲಿ ಕಳುಹಿಸಲ್ಪಡಬಹುದು.

3. ಪ್ರತಿ ದರಖಾಸ್ತಿನಲ್ಲಿಯೂ ಸದರೀ ದರಖಾಸ್ತು ಯಾವದಕ್ಕಾಗಿ ಕಳುಹಿಸಲ್ಪಡುತ್ತೊ ಅಂಥಾ ತಾಲ್ಲೂಕು ಯಾ ತಾಲ್ಲೂಕುಗಳ ಹೆಸರನ್ನೂ ನಮೂದಿಸಿರತಕ್ಕದ್ದಲ್ಲದೆ ಪ್ರತಿ ಒಂದು ತಾಲ್ಲೂಕಿಗೂ ಸಾಲಿಯಕಾನಾ ಕೊಡುವದಾಗಿ ಒಪ್ಪುವ ಸೊಬಲಗನ್ನೂ

ನಮೂದಿಸತಕ್ಕದ್ದು. ಮತ್ತು ದರಖಾಸ್ತು ಮಾಡುವಂಥಾ ತಾಲ್ಲೂಕು ವಂದಕ್ಕೆ ಬಂದು ನೂರು ರೂಪಾಯಿಗಳ ಪ್ರಕಾರ ಆಗುವ ಶೇವಣಿ ಮೊಬಲಗು ದರಖಾಸ್ತಿನೊಡನೆ ಕಳುಹಿಸತಕ್ಕದ್ದು. ಶೇವಣಿ ಮೊಬಲಗು ನಗದಾಗಿಯಾಗಲಿ, ಕ್ರಮವಾಗಿ ಮೈಸೂರು ದಿವಾನರವರ ಹೆಸರಿಗೆ ಯಿಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಕಳುಹಿಸತಕ್ಕದ್ದು.

4. ಪ್ರತಿ ದರಖಾಸ್ತೂ ವೊಹರ್ ಮಾಡಲ್ಪಟ್ಟು ಲಖೋಟೆವಳಗೆ ಹಾಕಲ್ಪಟ್ಟು "1890ನೇ ಇಸವಿ ಲಾಗಾಯತು ಎರಡು ವರುಷಗಳ ಪರಿಯಂತ ಕೇಂದಿ ಬಿಕರೀ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬಡಾಗಿ ವಿಳಾಸ ಬರೆಯಲ್ಪಡತಕ್ಕದ್ದು.

5. ದರಖಾಸ್ತುಗಳು, ಸ್ಯ 1890ನೇ ಇಸವಿ ಫಿಬ್ರವರಿ 26ನೇ ಮಕ್ಕುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪೂವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ಯಕ್ಸೈಜ್ ಕಮ್ಮಿಷನರವರ ದ್ವಾರ ದಿರ್ವಾರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರವರು ಚುನಾಯಿಸುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಕ್ರಮಪ್ರಕಾರ ಮೈಸೂರು ದಿವಾನರವರ ಹೆಸರಿಗೆ ಯಿಂಡಾರಸು ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇಹಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ದಿರ್ವಾರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂಥಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಜಡದ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಪ್ರೆಸಿಕೊಂಡಿರುತ್ತಾರೆ.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಿ 3 ವ 5ನೇ ಕಲಂ ಅನುಸರಿಸಿ, ಮೊದಲೇ ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಮೈಸೂರು ಶೇಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮ್ಮಿಷನರವರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂಬೆ ನಮೂದಾಗುವ ಷರತ್ತುಗಳಿಗನುಸರಿಸಿ ನಡದುಕೊಳ್ಳಲಿಕ್ಕೆ ಬದ್ಧನಾಗಿರುತ್ತೇನೆಂದು ಮಾಮೂಲ್ ನಮೂನೆಯಲ್ಲಿ ಸರಿಯಾದ ಫಾಪಾಕಾಗದದ ಮೇಲೆ ಬಂದು ಕರಾರು ಬರೆದು ಕೊಡತಕ್ಕದ್ದು. ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಯಿಜಾರೆಯು ದರಖಾಸ್ತುದಾರನ ಲುಕ್ಸಾನಿಗೆ ವಳಪಟ್ಟು ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

I. ಸಾಲಿಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ ವಿಧಿಸಲ್ಪಟ್ಟ ಲೋಕಲೆಸಸ್ ದೇಖೀಲ್ ಅಂತಾ ಇಜಾರೆ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮೂರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ಆ ದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಷೇಯಾನಾ ಸಮಾನಾದ ಖಿಸ್ತುಗಳ ಪ್ರಕಾರ ಪೂವತೀಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತವಾಂ ಬಾಕೀಗಳಿಗೂ ಶೇಕಡಾ ಸಾಲಿಯಾನಾ 6ರ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂಥಾ ಬಾಕೀ ಮೊಬಲಗುಗಳು ಪೂವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪೂವತೀಯಾಗದೇ ನಿಂತರೆ ಅವುಗಳು ಜಮೀರ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲಿಜಾರೀ ಇರುವ ರೂಲ್ಸಿನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು, ಮತ್ತು ಯಕ್ಸೈಜ್ ಕಮ್ಮಿಷನರವರ ದ್ವಾರಾ ದಿರ್ವಾರವರ ಮಂಜೂರಾತಿಯನ್ನು ಪಡೆದತರುವಾಯ ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳೆ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತವಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲೆ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀರ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

II. ಚಿಲ್ಲರೆ ಪುರೋಖ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರಿಂದ ನಮೂನೆ ಲೈಸೆನ್ಸುಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಬೋಕ್ತವಾದ ಮಂಜೂರಾತಿ ಇಲ್ಲದೆ ಇಜಾರೆದಾರನು ಹಾಲೀ ಕೇಂದಿ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೆ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅಹರ್ನಾಗಿರುತ್ತಾರೆ. ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಕೇಂದಿಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಪ್ಪಿವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ ತೆಗದುಕೊಳ್ಳಕೂಡದು.

IV. ಇಜಾರೇದಾರನು ಮೈಸೂರು ಗವರ್ಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ ತಮ್ಮ ಗ್ರಾಮಗಳ ಸರಹದ್ದುಗಳೊಳಗೆ ಅಂಥಾ ಹಕ್ಕುದಾರಿಗಳನ್ನು ಜಲಾಯಿಸುವದಕ್ಕೆ ಸನ್ನದ್ ವಗ್ಯೆರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರಿಗಳನ್ನು ಕೇಂದಿ ಹುಟ್ಟುವಳಿ ವಿಷಯದಲ್ಲಿ ಗುತ್ತಿಗೇದಾರನು ಚಲಾಯಿಸುವದಕ್ಕೆ ಪೂರ್ತಿಯಾಗಿ ಸ್ವತಂತ್ರನಾಗಿರುತ್ತಾನೆ. ಅಂಥಾ ಇನಾಮುದಾರರುಗಳ ಕೇಂದಿ ಹಕ್ಕುದಾರಿಗಳನ್ನು ಇಜಾರೇದಾರನು ಚಲಾಯಿಸಿದಾಗ್ಯೂ ಸರಿಯೆ ಅಥವಾ ಇಲ್ಲದಿದ್ದರೂ ಸರಿಯೆ ಮೇಲ್ಕಂಡ ಇನಾಂದಾರರುಗಳಿಗೆ ಸಲ್ಲಬೇಕಾದ ಕೇಂದಿ ಹುಟ್ಟುವಳಿಯು ಇಜಾರೇದಾರನಿಂದ ಪಾವತೀ ಮಾಡಲ್ಪಡತಕ್ಕದ್ದು, ಮತ್ತು ಅಂಥಾ ಮೊಬಲಗಿನ ವಿಷಯದಲ್ಲಿ ಇಜಾರೇದಾರರಿಗೂ, ಇನಾಂದಾರರಿಗೂ ಯಾವದಾದರೂ ವಿಶೇಷ ವಜಂಬಡಿಕೆ ಇಲ್ಲದ ಪಕ್ಷದಲ್ಲಿ ಜಾರಿಯಲ್ಲಿರತಕ್ಕ ರೂಲ್ಸ ಅನುಸರಿಸಿ ಗೊತ್ತುಮಾಡಲ್ಪಡತಕ್ಕದ್ದು, ಮತ್ತು ಅಂಥಾ ರೂಲ್ಸ ಇಲ್ಲದ ಪಕ್ಷಕ್ಕೆ ಮಾಮೂಲ್ ಅನುಸರಿಸಿ ಗೊತ್ತುಮಾಡಲ್ಪಡತಕ್ಕದ್ದು. ಕೇಂದಿ ಹುಟ್ಟುವಳಿಗಾಗಿ ಇನಾಂದಾರರ ಹಕ್ಕುದಾರೀಕುರಿತಾಗಲಿ ಅಥವಾ ಇಜಾರೇದಾರನಿಂದ ಇನಾಂದಾರರಿಗೆ ಸಲ್ಲಬೇಕಾದ ಕೇಂದಿ ಹುಟ್ಟುವಳಿ ಮೊಬಲಿಗಿನ ವಿಷಯದಲ್ಲಾಗಲಿ ಯಿನಾಂದಾರರಿಗೂ ಯಿಜಾರೆದಾರನಿಗೂ ತಕರಾರ್ ಸಂಭವಿಸಿದರೆ ಅಂಥಾ ತಕರಾರು ಕುರಿತು ಇಜಾರೇ ದಾರನಿಂದಲಾಗಲಿ, ಇನಾಮುದಾರರಿಂದಲಾಗಲಿ ಫಿರ್ಯಾದು ಬಂದ ತರುವಾಯ ಡಿಪ್ಯೂಟಿ ಕಮ್ಮಿಷನರವರು ಸದರೀ ತಕರಾರನ್ನು ಯುಕ್ತಾನುಸಾರ ನ್ಯಾಯ್ಯವಿದ್ದಂತೆ ಫೈಸಲ್ಮಾಡತಕ್ಕದ್ದು. ಮತ್ತು ಅಂಥಾ ಫೈಸಲಿಗೆ ಇಜಾರೇದಾರನು ಬದ್ಧನಾಗಿರತಕ್ಕದ್ದು. ಪರಂತು ಸದರೀ ಫೈಸಲ್ ಅಪ್ಪೀಲಿನಲ್ಲಿ ಗವರ್ಮೆಂಟಿನಿಂದ ಕಾಯಂಮಾಡಲ್ಪಡಲಿಕ್ಕಾಗಲಿ, ಅನ್ಯಥಾ ಆಗಲಿ ಗುರಿಯಾಗಿ ಇರತಕ್ಕದ್ದು. ಡಿಪ್ಯೂಟಿ ಕಮ್ಮಿಷನರವರಿಂದ ಅಂಥಾ ಫೈಸಲಾತಿಯಲ್ಲಾಗಲಿ ಅಥವಾ ಗವರ್ಮೆಂಟಿನಿಂದ ಅಪ್ಪೀಲಿನಲ್ಲಾಗಲಿ ಪಾವತಿ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು, ಜಮ್ಮಾ ಕಂದಾಯದ ಬಾಕೀ ವಸೂಲೀ ಬಗ್ಯಾಗಿ ತತ್ತಾಲದಲ್ಲಿ ಜಾರಿಯಲ್ಲಿ ಇರತಕ್ಕ ರೂಲ್ಸ ಅನುಸರಿಸಿ ಇಜಾರೇದಾರನಿಂದ ವಸೂಲ್ಮಾಡಲ್ಪಡತಕ್ಕದ್ದು

VI. ಬೆಳ್ಳಿಗ್ಯೆ 6 ಘಂಟೆಗೆ ಮುಂದಾಗಿ ಕೇಂದೀ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡಿಪ್ಯೂಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರ್ತು ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯರ್ ಸೋಲ್ಜರುಗಳ ಬಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆಪ್ರಾಂತ್ಯದಲ್ಲಿ ಸದ್ಯಃ ವೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಆದರ ಸಮೀಪದೊಳಗೆ ಕೇಂದಿ ಪುರೋಕ್ಷು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚಲ್ಪಡುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೂಜಿನವರು ತಮ್ಮ ಕಡೆ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯ್ಯವಾಗಿ ಇರತಕ್ಕದ್ದು.

VIII. ಇಜಾರೇದಾರನು ಸರಕಾರದ ಬಂಜರ್ ಜಮೀನಿನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಕ್ಷು ಬಗ್ಯಾಗಲೀ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಕೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ, ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡತಕ್ಕ ಜಮೀರ್ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ತಾಲ್ಲೂಕುಗಳಿಗೆ ಕೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂಥಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡಿಪ್ಯೂಟಿ ಕಮಿಷನರವರು ಆಗಿಂದಾಗ್ಯೆ ನಿದುಮಿಸುವ ಸ್ಥಳಗಳಲ್ಲೂ ವ ಪರತಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

IX. ಇಜಾರೇದಾರನು, ಪ್ರತಿ ತಾಲ್ಲೂಕಿಗೂ ನಾಜಾ ಮತ್ತು ಕರಾರ್‌ವಾಕಾ ಲೆಕ್ಕಗಳು ಇಡತಕ್ಕದ್ದು. ಅವುಗಳಲ್ಲಿ (1)ಕೇಂದಿ ಇಳಿಸಲ್ಪಟ್ಟ ಕೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಕೇಂದೀ ಕಟ್ಟಿದ ಮರಗಳ ಸಂಖ್ಯೆ (3) ರೋಜೀನಾ ಉತಾರ್ ಮಾಡಲ್ಪಟ್ಟ ಕೇಂದಿಯ ತೇದಾದು, (4) ರೋಜೀನಾ ಬಿಕರೀ ಮಾಡಲ್ಪಟ್ಟ ಕೇಂದಿಯ ತೇದಾದು, ಮತ್ತು (5) ಕೇಂದಿಯು ಸರಬರಾಯಿ ಮಾಡಲ್ಪಟ್ಟ ದುಕ್ಕಾಗಳ ಹೆಸರು ಈ ಬಾಬತು ತಪಸೀಲುಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್ದಾರ್ರಿಂದಾಗಲಿ ಯಾ ಆ ಬಗ್ಯಾಗಿ ಡಿಪ್ಯೂಟಿ ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಯಾವ ಆಫೀಸರರಿಂದಾಗಲಿ ತನಿಖೀ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು; ಮತ್ತು ಇವುಗಳ ನಕಲು ಡಿಪ್ಯೂಟಿ ಕಮ್ಮಿಷನರವರಿಂದಾಗಲಿ ಅಮಲ್ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನ್‌ಮೆಂಟಿನವರಿಂದ ವಿಧಿಸಲ್ಪಡುವಂತಾ ನಮೂನೆಯಲ್ಲಿ ಇಜಾರೇದಾರನಿಂದ ತಾಜರ್ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಕೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡಿ

ಬಾಧ್ಯತೆ ವುಳ್ಳವನಾಗಿರುವದಿಲ್ಲ. ತಾಲ್ಲೂಕಿಗೆ ಕೇರಿದ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮಾಕೂಫ್‌ಮಾಡಿ ಆ ಬಗ್ಗೆ ನ್ಯಾಯವಾದ ಈಡು ವೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯರ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯರ್ ಯಾ ಯೂರೇಷಿಯರ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲಿಸಿನವನಿಗಾಗಲಿ, ತಿಳಿದು ಕೇಂದಿಯನ್ನು ವಾರ್ಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕೆಲಾಫ್‌ಗಲಿ ನಡೆದಲ್ಲಿ ಅದರಿಂದ ಯಿಜಾರೇದಾರನು ಯಾ ಬಿಕರೀದಾರನು ಪ್ರತ್ಯೇಕವಾಗಿ ಯಾ ಸಮುಷ್ಟಿಯಾಗಿ ಪೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕರೀದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗಿರುತ್ತೆ.

XII. ಯಿಜಾರೆದಾರನು, ತನ್ನ ನೌಕರರು ಯಾ ಮುತಾಲಿಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಿಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಕೇಂದೀ ಇಳಿಸುವದಕ್ಕೆ ಕೆತ್ತರ ಬೇಕಾದ ಗರಿಗಳು ಹೊರತು ಅನ್ಯಥಾ ಗರಿಗಳು ಕತ್ತರಿಸಬೆಯೂ, ಉಪಯೋಗಿಸಬೆಯೂ ಇರುವ ಬಗ್ಗೆ ಜವಾಬ್ದಾರನಾಗಿರತಕ್ಕದ್ದು. ಮತ್ತು, ಗಿಡಗಳನ್ನೆ ಆಗಲಿ ಅವು ಸತ್ತು ಹೋಗುವಂತೆ ಅಜಾಗ್ರತೆಯಾಗಿ ಕಟ್ಟಿ ಕೂಡದು ಈ ನಿಬಂಧನೆಗಳಿಗೆ ಯೀನಾದರೂ ಬರಕೆಲಾಫ್ ನಡೆದರೆ ಅದರಿಂದ, ಪೊದಲನೇಶಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಯಿಜಾರೇದಾರನು ಗುರಿಯಾಗಿರತಕ್ಕದ್ದು.

XIII. ಕೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ, ಮಾರಲ್ಪಡತಕ್ಕದ್ದು.

	ಕೇರುವಂದಕ್ಕೆ ಖರೀದಿ.		ರೊಟ್ಟಿಸುಡತಕ್ಕವರಿಗಾಗಿ ಕೇರು ಬಂದಕ್ಕೆ ಕಾಯಂಖರೀದಿ.
	ಜಾಸ್ತಿ.	ಕಮ್ಮಿ.	
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಬೆಂಗಳೂರು ಪಟ್ಟಣ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ.	0—1—6	0—1—0	0—1—0
ತಾಲ್ಲೂಕು ಕಸಬಾ ಭಾಗಗಳಲ್ಲಿ	0—1—3	0—0—10	
ಗ್ರಾಮಾಂತ್ರಗಳಲ್ಲಿ	0—1—0	0—0—8	

8. ಕೇಂದೀ ಸಾಗಿಸುವಟಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ ವಿಧಿಸಲ್ಪಟ್ಟ ವೊಹತಫರ್ಕಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

9. 1881—82ನೇ ಇಸವಿ ಲಾಗಾಯತು ಸಾಲೀಯಾನಾ ಕೇಂದಿ ಹುಟ್ಟುವಳಿಯು ಇದರಡಿ ನಮೂದಿಸಲ್ಪಟ್ಟಿರುತ್ತದೆ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನು, ಡೆಪ್ಯೂಟಿ ಕಮ್ಮಿಷನರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

1881—82ನೇ ಇಸವಿ ಲಾಗಾಯತು 1883—84ನೇ 3 ವರುಷಗಳ ಕಾಲಕ್ಕೆ ರೂ. 86,500 ಸಾಲಿಯಾನಾ
1884—85ನೇ ಇಸವಿ ಲಾಗಾಯತು 1886—87ನೇ 3 ವರುಷಗಳ ಕಾಲಕ್ಕೆ ,, 121,750 ಸಾಲಿಯಾನಾ
1887—88ನೇ ಇಸವಿ ಲಾಗಾಯತು 1889—90ನೇ 3 ವರುಷಗಳ ಕಾಲಕ್ಕೆ ,, 116,045 ಸಾಲಿಯಾನಾ

ನಂ. 329. ತಾರೀಖು 12ನೇ ಫಿಬ್ರವರಿ 1890.

ಮೈಸೂರು, ಬೆಂಗಳೂರು, ಹಾಸನ, ಕೋಲಾರ, ತುಮಕೂರು, ಚಿತ್ರದುರ್ಗ ಈ ಡಿಸ್ಟ್ರಿಕ್ಟುಗಳ ಕೇಂದಿ ಬಾಬ್ ಇಜಾರೆಗಾಗಿ ದರಖಾಸ್ತುಗಳು ಕೋರಲ್ಪಟ್ಟು ಇದರ ಬಾಜೂದಲ್ಲಿ ನಮೂದಾಗುವ ಮೈಸೂರ ಸರ್ಕಾರದ ಇಸ್ತಿಹಾರ್‌ಗಳನ್ನನುಸರಿಸಿ, ಸಮಸ್ತ ಜನರಿಗೂ ತಿಳಿಯತಕ್ಕ ಬಗ್ಗೆ ಇದರ ದೆಕೆಯಿಂದ ಪ್ರಕಟ ಪಡಿಸುವದೇನಂದರೆ,—ಮೇಲೆ ಹೆಳೋಣಾದ ಆಯಾಯ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ಗಳಿಗೆ ಹೋಗಲು ಅನಾನುಕೂಲವುಳ್ಳ ಜನರು ತಾವು ಯಾವ್ಯಾವ ಡಿಸ್ಟ್ರಿಕ್ಟಿಗಾಗಿ ದರಖಾಸ್ತು ಮಾಡಬೇಕೆಂದು ಅಪೇಕ್ಷಿಸುತ್ತಾರೋ ಆಯಾಯ ಡಿಸ್ಟ್ರಿಕ್ಟಿಗೋಸ್ಕರ ವೊಕರಾರ್ಮಾಡಲ್ಪಟ್ಟಿರುವಂತಾ ತಾರೀಖು ವ ಘಂಟೆಗೆ ಸರಿಯಾಗಿ ಪೆಂಗಳೂರಲ್ಲಿರುವ ಯು ಕ್ಸೈಜ್ ಕಮ್ಮಿಷನರವರ ಆಫಿಸಿನಲ್ಲಿ ವೊಹರ್‌ನಿಶಿ ಬಂದ್ ಮಾಡಲ್ಪಟ್ಟ ದರಖಾಸ್ತುಗಳನ್ನ ಹಾಜರ್‌ಮಾಡಬಹುದು—ಹಾಗೆ ಹಾಜರ್‌ಮಾಡೋಣಾವ ದರಖಾಸ್ತ್ತುಗಳನ್ನ ಮೇಲ್ಕಂಡ ಇಸ್ತಿಹಾರ್‌ಗಳನುಸರಿಸಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ಗಳಲ್ಲಿ ಹಾಜರ್‌ಮಾಡಲ್ಪಡುವ ದರಖಾಸ್ತುಗಳಿಂದಿಗೆ ಕ್ರಮವಾಗಿ ಆಲೋಚನೆಗೆ ತರಲಾಫೀತು.

*1 ಬೆಂಗಳೂರು ಡಿಸ್ಟ್ರಿಕ್ಟು ವಿನಾ ಇತರ ಡಿಸ್ಟ್ರಿಕ್ಟಿಗೆ ತಾ|| 25ನೇ ಜನವರಿ 1890.
2 ಬೆಂಗಳೂರು ಡಿಸ್ಟ್ರಿಕ್ಟಿಗೆ ತಾರೀಖು 12ನೇ ಫಿಬ್ರವರಿ 1890—ನಂಬರ್ 328.

ತಾರೀಖು 27ನೇ ಜನವರಿ 1890.

ನಂ. 296.—ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟ ಪಡಿಸುವದೇನಂದರೆ, 1890ನೇ ಇಸವಿ ಜನವರಿ 8ನೇ ಮುಕ್ತಿಮಿನಲ್ಲಿ ಶಿವನೊಗ್ಗೆಯೊಳಗೆ ಮೂರನೇ ಕ್ಲಾಸ್ ತಂತಿ ವರ್ತಮಾನದ ಆಫಿಸ್ ಸ್ಥಾಪಿಸಲ್ಪಟ್ಟಿರುತ್ತೆ.

ತಾರೀಖು 28ನೇ ಜನವರಿ 1889.

ನಂ. 298.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಆಕ್ವಿಜಿಷ್ಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಉದಹರಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರದ ಕೆಲಸಕ್ಕೆ ಅಂದರೆ ಚನ್ನರಾಯಪಟ್ಟಣ ತಾಲ್ಲೂಕು ಹಿರೇಸಾವೆ ಗ್ರಾಮದಸ್ಥ ಉಪಯೋಗದ ಬಗ್ಯೆ ಕೋಟೆಯಿಂದ ಪೇಟೆಗೆ ಹೋಗತಕ್ಕ ರಸ್ತೆಯನ್ನು ಬಿಡಾಯಿಸುವ ಬಗ್ಯೆ ಕೇಳಿಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಚತುರ್ಹದ್ದಿ.	ವಿಸ್ತೀರ್ಣ.	ಷರಾ.
ಹಾಸನ	ಚನ್ನರಾಯಪಟ್ಟಣ	ಹಿರೇಸಾವೆ	ಸುಬ್ಬಯ್ಯ	ಪೂರ್ವಕ್ಕೆ—ಹನುಮಂತರಾಯನ ದೇವಸ್ಥಾನದ ಬಳಿಯಣ ರಸ್ತೆ ಪಶ್ಚಿಮಕ್ಕೆ—ಕೋಟೆಹಿಂದಣ ದಿಂಣೆ ಉತ್ತರಕ್ಕೆ—ಬಿಲ್ವಪತ್ರೆ ಮರ ಮತ್ತು ಸುಬ್ಬಯ್ಯನ ಖಂಜರ್ ಭೂಮಿ ದಕ್ಷಿಣಕ್ಕೆ—ಹಿರೇಸಾವೆ ಗ್ರಾಮಕ್ಕೆ ಹೋಗುವ ರಸ್ತೆ	10×9=90 ಗಜಗಳು	

ತಾರೀಖು 31ನೇ ಜನವರಿ 1890.

ನಂ. 316.—ಸ್ಯ 1888ನೇ ಇಸವಿಯ 4ನೇ ರೆಗ್ಯುಲೇಷ್ಷನ್ ಎಂಬ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಕಲಮನುಸರಿಸಿ, ಇದರಡಿ ನಮೂದಾಗುವ ಗ್ರಾಮಗಳಿಗೆ ಕಾಯಂಗುತ್ತಾದಾರುಗಳ ಖಾಯಿಷ್ ಮೇರೆಗೆ ಅವುಗಳಲ್ಲಿ ಡಿಟೈಲ್ ಸರ್ವೆ ಕೆಲಸ ನಡಿಯತಕ್ಕ ಬಗ್ಯಾಗಿ ಯಷ್ಟುಮಟ್ಟಿಗೆ ಆವಶ್ಯಕ ವುಂಟೋ ಅಷ್ಟರ ಮಟ್ಟಿಗೂ ಸದರೀ ಕೋಡಿನ 8 ವ 9ನೇ ಚಾಪ್ಟರುಗಳ ನಿಬಂಧನೆಗಳು ಲಗಾವಾಗತಕ್ಕದ್ದೆಂತ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡಿಸಿರುತ್ತಾರೆ.

ಬೆಂಗಳೂರು ತಾಲ್ಲೂಕು ಪೈಕಿ—ಕೋಡಿಹಳ್ಳಿ ಕಾಯಂಗುತ್ತಾ ಗ್ರಾಮ.

ಡಿಟೋ	ಡಿಟೋ	ಕೂಡೇನಹಳ್ಳಿ	ಡಿಟೋ
ಡಿಟೋ	ಡಿಟೋ	ಮಹದೇವಪುರ	ಡಿಟೋ

ತಾರೀಖು 4ನೇ ಫಿಬ್ರವರಿ 1890.

ನಂ. 319.—ಕೆಲವು ಉದ್ಯೋಗಸ್ಥರನ್ನ 1878ನೇ ಇಸವಿ XIನೇ ನಂಬರ್ ಉಳ್ಳ ಇಂಡಿಯ್ಯ ಆರಂಸ್ ಆಕ್ಟಿನ 13—14—15 ಮತ್ತು 16ನೇ ಸೆಕ್ಷನ್‌ಗಳಲ್ಲಿ ಅಡಗಿರತಕ್ಕ ತಮ್ಮಾಂ ನಿರ್ಭಂಧದ ದೆಶೆಯಿಂದಲೂ ನಿಯಮಗಳ ದೆಶೆಯಿಂದಲೂ ವಿನಾಯಿಸುವಂಥಾ ಫಾರೆಸ್ಟ್ ಡಿಪಾರ್ಟ್‌ಮೆಂಟಿನ 1880ನೇ ಇಸವಿ ಜನವರಿ 7ನೇ ಮುಕ್ತಿಂ 28. I. P. ನಂಬರುಳ್ಳ ಇನ್ಸ್ಟ್ರಾರ್ನಾಮೆಯ 1ನೇ ಪ್ಯಾರೆಗ್ರಾಫಿನ IIನೇ ಕ್ಲಾಜ್‌ಗೆ ಬದಲಾಗಿ ಇದರಡಿ ಬರುವ ಪರಿಷ್ಕರಿಸಲ್ಪಟ್ಟ ಕ್ಲಾಜು ಕೇರಿಸಲ್ಪಡತಕ್ಕದ್ದು.

(1.) ತಮ್ಮಾ ರೆವಿನ್ಯೂ ಉದ್ಯೋಗಸ್ಥರೂ ಇಂಜನೀರುಗಳೂ, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ತಾಬೇದಾರ್ ಉದ್ಯೋಗಸ್ಥರೂ ಮತ್ತು ಮೇಲ್ಪಟ್ಟ ಇಲಾಖಾ ಹುದ್ದೇದಾರರು ಕೆಲಸದ ಮೇಲಿರುವಾಗ ಆಯುಧಗಳನ್ನುಂಟಾಗಿರತಕ್ಕದ್ದೆಂದು ಹೇಳುವಂಥಾ ಸರಹದ್ದು ಯಾ ಜಂಗಲ್ ಡಿಸ್ಟ್ರಿಕ್ಟುಗಳಲ್ಲಿನ ಪೋಸ್ಟಲ್ ರನ್ನರ್‌ಗಳು.

ತಾರೀಖು 6ನೇ ಫಿಬ್ರವರಿ 1890.

ನಂ. 322.—ಸಕಲ ಜನಗಳಿಗೂ ತಿಳಿಯುವಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಿಗೇದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ಜೇಬೀಲ್ ಕಂಪನಿಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿ ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ನುಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗೆಲ್ಲತ್ತು ಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುರಕಾರಕ್ಕೆ ಕೊಟ್ಟುವಳ್ಳೀ ಯಾಡಬೇಕಾದ ಪೈಬೇರೀಜು.	ಸಾಲಿಯಾನಾ ಸರ್ಕಾರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ.	ಬಿಡ ಪೆಟ್ಟು. ಜಂಗಮಕೋಟೆ.	ಕಾಯಂಗುತ್ತಾ ಅಂಗತಟ್ಟ ಗ್ರಾಮ.	ಹನುಮಂತರಾವ್	ಎ. ಗುಂ. 113 30	ರೂ. ಆ. ಪೈ. 429 4 7	ರೂ. ಆ. ಪೈ. 324 1 0	ರೂ. ಆ. ಪೈ. 278 6 3 ಮತ್ತು ಬಡ್ಡಿ	1890ನೇ ಇಸವಿ ಮಾರ್ಚಿ ತಾರೀಖು 17ರಲ್ಲು ತಾಲ್ಲೂಕ್‌ಕಚೇರಿಯಲ್ಲಿ ಅಮಲ್‌ದಾರ್ರು ರೂಬರೂ
	ಕೋಲಾರ. ವೇಮಗಲ್ಲು.	ಡಿಟೋ ಗಿರಿ ಜಂಪೇಟಿ.	ವೇನಪ್ಪ ಮತ್ತು ವೆಂಕಟಸುಬ್ಬಯ್ಯ	ಖಂ. ಕೂ. ಪ. 10 3 8	71 13 0	61 7 11	207 4 6 ಮತ್ತು ಬಡ್ಡಿ	ಡಿಟೋ
		ಡಿಟೋ ಪುರ	ಚಿತಂಬರರಾವ್ ರಂಗರಾವ್ ವಗೈರೆ	ಎ. ಗುಂ. 250 28	82 0 7	87 2 0	187 5 0 ಮತ್ತು ಬಡ್ಡಿ	ಡಿಟೋ ತಾ|| 18ರಲ್ಲು
	ಬಿಡ ಪೆಟ್ಟು. ಜಂಗಮಕೋಟೆ.	ಡಿಟೋ ಹೈಪ್ಲಹಳ್ಳಿ	ಚಿತಂಬರರಾವ್ ವ ಅಚ್ಚಣ್ಣ	ಎ. ಗುಂ. ಗ. 477 0 6	154 2 4	110 8 0	538 0 5 ಮತ್ತು ಬಡ್ಡಿ	ಡಿಟೋ

ಷರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟತಮಾಂ ಹಿಡುವಳಿಗಳಿಗೂ ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರಿ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 8ನೇ ಫಿಬ್ರವರಿ 1890.

ನಂ. 324.—ಮೆ॥ ಎಸ್. ವೆಂಕಟವರದಯ್ಯಂಗಾರ್ ಬಿ. ಎ ಯಂ. ಎಲ್. ಯವರು, ಮೈಸೂರು ದೇಶದ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಆಫಿಸ್ ಚಾರ್ಜನ್ನು ಮತ್ತು ಕಂಪನಿಗಳ ರಿಜಿಸ್ಟರ್ ಆಫಿಸ್ ಚಾರ್ಜನ್ನು ಸುದಾ 1890ನೇ ಇಸವಿ ಫಿಬ್ರವರಿ 3ನೇ ಮುಮ್ಮಿನ ಪೂರ್ವಾನ್ಹದಲ್ಲಿ ಮೆ॥ ಸಿ. ವಿಾನಾಕ್ಷಯ್ಯ ಬ್ಯಾರಿಸ್ಟರ್ ಆಟ್ ಲಾ ಯವರಿಗೆ ಒಪ್ಪಿಸಿರುತ್ತಾರೆ.

ನಂ. 325.—ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಜೆ ಜಿ. ನಾರ್ತ್ ಯವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಒಂದು ತಿಂಗಳೂ ಇಪ್ಪತ್ತ್ನಾಲ್ಕು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ॥ ಜೆ. ಜಿ. ನಾರ್ತ್ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮೆ॥ ಫ್ರಾನ್ಸಿಜೆ ಬಿಕ್ಕಾಜೆಯವರಿಗೆ ಫ್ರೆಂಚ್ ರಾಕ್ಸ್ ಸಬ್ ಡಿವಿಜನಿನ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಫಿಬ್ರವರಿ 1890.

ನಂ. 326.—ಬ್ಯಾರಿಸ್ಟರ್ ಆಟ್ ಲಾ ಮತ್ತು ಗವರ್ನಮೆಂಟ್ ಆಡ್ವೊಕೇಟರಾದ ಮೆ॥ ಸಿ. ವಿಾನಾಕ್ಷಯ್ಯನವರಿಗೆ, 1890ನೆ ಇಸವಿ ಜನವರಿ 10ನೇ ಮುಕ್ತುಂ 282ನೇ ನಂಬರ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾವು 1890ನೇ ಇಸವಿ ಜನವರಿ ಆಖೈರ್ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಫಿಬ್ರವರಿ 1890.

ನಂ. 327.—ಪೋಲೀಸ್ ಸೂಪರಿಟೆಂಡೆಂಟ್ ಮೆ॥ ಸಿ. ರಾಘವಾಚಾರ್ಲು ಯವರಿಗೆ, 1889ನೇ ಇಸವಿ ಡಿಸಂಬರ್ 23ನೇ ಮುಕ್ತುಂ 275ನೇ ನಂಬರ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಒಂದು ತಿಂಗಳ ಪ್ರಿವಿಲೀಜ್ ರಜಾವು ಇನ್ನೂ ಒಂದು ವಾರದ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ಫಿಬ್ರವರಿ 1890.

ನಂ. 330.—ಮೆ॥ ಎಸ್. ವೆಂಕಟವರದಯ್ಯಂಗಾರ್ ಬಿ. ಎ. ಯಂ. ಎಲ್. ಯವರು, 1890ನೇ ಇಸವಿ ಫಿಬ್ರವರಿ 3ನೇ ಮುಮ್ಮಿನ ಪೂರ್ವಾನ್ಹದಲ್ಲಿ ಲೆಜಿಸ್ಲೇಟಿವ್ ಸೆಕ್ರಟರಿ ಆಫಿಸ್ ಚಾರ್ಜನ್ನು ಮೆ॥ ಸಿ. ವಿಾನಾಕ್ಷಯ್ಯ ಬ್ಯಾರಿಸ್ಟರ್-ಆಟ್ ಲಾ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 14ನೇ ಫಿಬ್ರವರಿ 1890.

ನಂ. 334.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದೆ ಪ್ರಕಾರ) ಜೋಡಿ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಸುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಜಪ್ತ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇರೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೈಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಏರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮುಂತೋದಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತ್‌ಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೊಬಳಿ.	ಗ್ರಾಮ.	ಕಾಯಂಗುತ್ತಾವ ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎ. ಸೆಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಚಿಂತಾಮಣಿ.		ಜೋಡಿ ಗುಡಿವಾಬನಹಳ್ಳಿ.	ಗೋವಿಂದರಾವ್ ರಾಘವೇಂದ್ರರಾವ ವಗೈರೆ	203 65	200 0 0	88 8 0 ಲೋಕೆಲ್‌ಸೆಸ್ ದೇಖಿಲ್	181 3 10 ಮತ್ತು ಬಡ್ಡಿ	ಸ್ರ 1890ನೇ ಇಸವಿ ಮಾರ್ಚಿ ತಾರೀಖು 15ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರು ರೂಬರೂ.
		ಚಿಲಕಲನೇರ್ಪ.	ಕಾಯಂಗುತ್ತಾ ಕಿಲಾರದಿಂಣಿ.	ರಂಗಣ್ಣ ನಂ ಜುಂಡಯ್ಯ ವಗೈರೆ.	ಎ. ಗುಂ. ಗ. 143 4 0	11 14 10	12 12 0 ಲೋಕಲ್‌ಸೆಸ್ ದೇಖಿಲ್	148 13 10 ಮತ್ತು ಬಡ್ಡಿ	ಡಿಟೋ
		ಚಿಡಪಟ್ಟು.	ಜೋಡೀ ಕಾರಿ ಜಂಗಲಹಳ್ಳಿ.	ಕವಲಾಬಾಯಿ ನಾರಣಾಚಾರಿ ವಗೈರೆ.	ಎ. ಗುಂ. 108 9	40 0 0	24 8 0 ಲೋಕಲ್‌ಸೆಸ್ ದೇಖಿಲ್	231 11 5 ಮತ್ತು ಬಡ್ಡಿ	ಡಿಟೋ

ಪರಾ.—ಜೋಡಿ ವ ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿ ಯಾ ದೇಣಿಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲೀ ಸದರೀ ಹರಾಜು ವಳಪಟ್ಟಿರುವದಿಲ್ಲ.

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟರಿ.